ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಕೆ.ಬಿ.ವಿ ವಕೀಲವರಿಂದಃ

ನಾನು ಎಸ್.ಎಸ್.ಎಲ್.ಸಿ ವರೆಗೂ ಓದಿರುತ್ತೇನೆ. ನಾನು ಕಳೆದ 15 ವರ್ಷದಿಂದ ಪಾದರಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿರುತ್ತೇನೆ. ಅದಕ್ಕಿಂತ ಮುಂಚೆ ಮಾಗಡಿಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದೆ. ನಾನು ಐಜೂರಿನಲ್ಲಿ ಮೊದಲಿನಿಂದಲೂ ಸ್ವಂತ ಮನೆಯಲ್ಲಿ ವಾಸವಾಗಿರುತ್ತೇನೆ. ಬಿ. ರಮೇಶ್ ಸುಮಾರು 12 ವರ್ಷದಿಂದ ಪರಿಚಯ. ರಮೇಶ್ ಅವರ ಕಟ್ಟಡದಲ್ಲಿ ಭಾರತಿ ನರ್ಸಿಂಗ್ ಹೋಂ ಇದ್ದು ಅಲ್ಲಿ ಹೋಗುತ್ತಿದ್ದಾಗ ಪರಿಚಯ ಆಗಿರುತ್ತಾರೆ. ರಮೇಶ್ ಅವರ ತಂದೆ ಏನಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ರಮೇಶ್ ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಮಕ್ಕಳು. ದಾವೆಯಲ್ಲಿ ಮೂರು ಜನರನ್ನು ಪಾಟೀ ಮಾಡಿರುತ್ತೇನೆ ಎಂದರೆ ಸಾಕ್ಷಿಯು ರಮೇಶ್ ಅವರ ಇಬ್ಬರು ಮಕ್ಕಳು ಮತ್ತು ಅವರ ಹೆಂಡತಿಯ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ರಮೇಶ್ ಅವರ ಮಕ್ಕಳ ಹೆಸರು ಮೋಹಿತ್ ಮತ್ತೊಬ್ಬನ ಹೆಸರು ನೆನಪಿರುವುದಿಲ್ಲ. ರಮೇಶ್ ಅವರ ಮೊದಲನೇ ಹೆಂಡತಿ ಹೆಸರು ಮಾಲತಿ. ನಾನು ಅವರನ್ನು ನೋಡಿರುವುದಿಲ್ಲ. ಮೋಹಿತ್ ಮಾಲತಿಯವರ ಮಗ. ಮೋಹಿತ್ ಅವರನ್ನು ನೋಡಿರುತ್ತೇನೆ. ಮೋಹಿತ್ ಈಗ ಎಲ್ಲಿ ವಾಸಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೋಹಿತ್ ಯಾರ ಜೊತೆ ವಾಸವಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ಲಿಖಿತ ಹೇಳಿಕೆಯಲ್ಲಿ ಮಾಲತಿಯವರು ಆತ್ಮಹತ್ಯೆ

ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತೇವೆ ಎಂದರೆ ಆ ರೀತಿ ಬರೆದಿರುತ್ತಾರೆ ಆದರೆ ಅದರ ಬಗ್ಗೆ ನನಗೆ ವಯಕ್ತಿಕವಾಗಿ ಗೊತ್ತಿರುವುದಿಲ್ಲ. ದಾವಾ ಆಸ್ತಿ ಐಜೂರು ಪಕ್ಕದಲ್ಲಿ ಇದೆ ಎಂದರೆ ಸಾಕ್ಷಿಯು ಅರ್ಧ ಕಿ.ಮೀಗಿಂತ ಕಡಿಮೆ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಶೀಟ್ ಮನೆ. ದಾವಾ ಆಸ್ತಿ ರಾಮನಗರದ ಹೃದಯಭಾಗದಲ್ಲಿ ಇದೆ ಎಂದರೆ ಸರಿ. ಮಾಲತಿ ಆತ್ಮಹತ್ಯೆಗೆ ರಮೇಶ್ ಅವರ ದುಷ್ಚಟ ಮತ್ತು ಮಾನಸಿಕ ಹಿಂಸೆಯಿಂದ ಮಾಲತಿಗೆ ತೊಂದರೆ ಕೊಡುತ್ತಿದ್ದರು ಎಂದು ಅವರ ಪೋಷಕರು ಗಲಾಟೆ ಮಾಡಿದ್ದಾಗ ಆಗ ದಾವಾ ಆಸ್ತಿಯ ಮೊದಲನೇ ಅಂತಸ್ತನ್ನು 3 ನೇ ಪ್ರತಿವಾದಿ ಹೆಸರಿಗೆ ಮತ್ತು ಜಮೀನನ್ನು ವ್ಯವಸ್ಥಾ ಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ ಮತ್ತು 3 ನೇ ಪ್ರತಿವಾದಿಯ ಚಿಕ್ಕಪ್ಪ ಡಾಃ ಬಿ.ಪ್ರಕಾಶ್ ಅವರನ್ನು ಗಾರ್ಡಿಯನ್ ಆಗಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ರಮೇಶ್ 1 ನೇ ಪ್ರತಿವಾದಿಯನ್ನು 2 ನೇ ಬಾರಿಗೆ ಮದುವೆಯಾಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಮೇಶ್ 1 ನೇ ಪ್ರತಿವಾದಿಯನ್ನು ಮದುವೆಯಾದ ನಂತರವೂ ಕೂಡ ರಮೇಶ್ ಅವರ ದುಶ್ಚಟದಿಂದ 1 ನೇ ಪ್ರತಿವಾದಿಗೆ ಹಿಂಸೆ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ರಮೇಶ್ ಅವರ ತಾಯಿ ಊಟಿ ಊರಿನವರು ಎಂದರೆ ನನಗೆ ಗೊತ್ತಿಲ್ಲ. ರಮೇಶ್ ಅವರ ತಾಯಿ ಕಡೆಯವರು ಆರ್ಥಿಕವಾಗಿ ಶ್ರೀಮಂತರು ಎಂದರೆ ನನಗೆ ಗೊತ್ತಿಲ್ಲ. ರಮೇಶ್ ಅವರು ಇದ್ದಾಗ ಹಾಗೂ ನಂತರವೂ ಅವರ ತಾಯಿ 1 ಮತ್ತು 2 ನೇ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿ ದಿ:25-03-2010 ರಲ್ಲಿ ನೊಂದಣಿ ಕರಾರು ಪತ್ರವನ್ನು

ರಮೇಶ್ ಅವರು ಸೋಮಶೇಖರ್ ರೆಡ್ಡಿ ಅವರಿಗೆ ಮಾಡಿರುವ ಬಗ್ಗೆ ಉಲ್ಲೇಖ ಇದೆ ಎಂದರೆ ಸಾಕ್ಷಿಯು ಆ ರೀತಿ ಇದೆ ಆದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕರಾರು ಮಾಡಿಕೊಳ್ಳುವ ಮುಂಚೆ ದಾವಾ ಆಸ್ತಿಯ ಬಗ್ಗೆ ಹಿಂದೆ ಏನು ವ್ಯವಹಾರ ಆಗಿರುತ್ತದೆ ಎಂದು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನಾ ಎಂದರೆ ಸಾಕ್ಷಿಯು ನಾನು ಪರಿಶೀಲನೆ ಮಾಡಿದ್ದು ಏನೂ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಓಎಸ್ 169/2014 ದಾವೆಯ ಬಗ್ಗೆ ದಾಖಲೆಗಳನ್ನು ಪಡೆದುಕೊಂಡು ಪರಿಶೀಲನೆ ಮಾಡಲು ಪ್ರಯತ್ನ ಮಾಡಿರುವುದಿಲ್ಲ. ದಿಃ17-08-2011 ರಂದು ಹಳೆಯ ಕರಾರು ಪತ್ರ ರದ್ದು ಮಾಡಿ ಅದೇ ದಿನ ಮತ್ತೊಂದು ಕರಾರು ಪತ್ರ ಆಗಿರುತ್ತದೆ ಎಂದು ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದು ಅದನ್ನು ಪರಿಶೀಲನೆ ಮಾಡಿರುತ್ತೇನಾ ಎಂದರೆ ಮಾಡಿರುವುದಿಲ್ಲ. ಸದರಿ ದಾಖಲೆಗಳನ್ನು ನೋಡಿ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಈ ದಾವೆ ಇರುವ ಕಾರಣ ಸದರಿ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸೋಮಶೇಖರ್ ರೆಡ್ಡಿ ಮತ್ತು ನಾನು ಸ್ನೇಹಿತರು ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸೋಮಶೇಖರ್ ರೆಡ್ಡಿಯವರ ಸ್ನೇಹಿತರಾದ ಕಾರಣ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ಪಡೆದು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸೋಮಶೇಖರ್ ರೆಡ್ಡಿ ಇನ್ನೂ ಕೆಲವರು ರಮೇಶ್ ಅವರ ಮನೆ ಹತ್ತಿರ ಹೋಗಿ ಆಗಾಗ ಗಲಾಟೆ ಮಾಡಿರುತ್ತೇವೆ

ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಯಾವತ್ತೂ ರಮೇಶ್ ಅವರ ಮನೆ ಹತ್ತಿರ ಹೋಗಿ ಗಲಾಟೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯನ್ನು ನೊಂದಣಿ ಕಚೇರಿಯಲ್ಲಿ ಮಾತ್ರ ನೋಡಿರುತ್ತೇನೆ. ಅದಕ್ಕಿಂತ ಮುಂಚೆ ಪರಿಚಯ ಇರುವುದಿಲ್ಲ. ದಾವಾ ಆಸ್ತಿ ರಮೇಶ್ ಅವರಿಗೆ ಅವರ ತಾಯಿಯಿಂದ ದಾನ ಪತ್ರದ ಮೂಲಕ ಬಂದಿರುತ್ತದೆ. ರಮೇಶ್ ಅವರ ಮೃತ ದೇಹ ಧರ್ಮಸ್ಥಳದಲ್ಲಿ ಸಿಕ್ಕಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಇತರರು ಸೇರಿ ಎಲ್ಲರೂ ರಮೇಶ್ ಅವರನ್ನು ಹತ್ಯೆ ಮಾಡಿರುತ್ತೇವೆ ಎಂದು ದೂರನ್ನು ಕೊಡಬೇಕೆಂದು 1 ನೇ ಪ್ರತಿವಾದಿ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ರಮೇಶ್ ಅವರಿಗೆ ಏನೂ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆ ಹಾಕುವ 2 ತಿಂಗಳ ಹಿಂದೆ ರಮೇಶ್ ತೀರಿಕೊಂಡಿರುವ ಬಗ್ಗೆ ಗೊತ್ತಾಗಿರುತ್ತದೆ. ಆಗ ರಮೇಶ್ ಅವರು ಧರ್ಮಸ್ಥಳದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ.

ಮುಂದುವರಿದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

**ಪಿ.ಡಬ್ಲ್ಯೂ.1**

ಪಿ.ಡಬ್ಲ್ಯೂ.1